# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್
# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@yahoo.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.


ಸಂಖ್ಯೆ: ಕೇಪಿಜಿಟಿ/ಪಿ19/2013-14/ 8458 ದಿನಾಂಕ: 11 OCT 2013

## ಸುತ್ತೋಲೆ

ವಿಷಯ: ಪ್ರತಿ ಮಾಹೆ ಪಿಂಚಣಿ/ಕುಟುಂಬ ಪಿಂಚಣಿ ನಿಧಿ ಕೋರಿಕೆಯಲ್ಲಿ ವಿವರಣೆ ನೀಡುವ ಕುರಿತು.

* * * * *

ಎಲ್ಲಾ ಲೆಕ್ಕ ಘಟಕಗಳು ಪ್ರತಿ ಮಾಹೆ ಪಿಂಚಣಿ/ಕುಟುಂಬ ಪಿಂಚಣಿ ಪಾವತಿಸುವ ಸಲುವಾಗಿ ಈ ಕಛೇರಿಗೆ ಕೋರಿಕೆ ಸಲ್ಲಿಸುತ್ತಿದ್ದು ಅವುಗಳಲ್ಲಿ ಈ ಕೆಳಗೆ ತಿಳಿಸಿದ ಹಲವಾರು ನ್ಯೂನತೆಗಳು ಕಂಡುಬಂದಿದ್ದರೂ ಸಹ ಪಿಂಚಣಿ/ಕುಟುಂಬ ಪಿಂಚಣಿದಾರರ ಹಿತ ಕಾಪಾಡುವ ಸಲುವಾಗಿ ನಿಧಿ ವರ್ಗಾವಣೆಯನ್ನು ನಿಯತವಾಗಿ ಮಾಡಲಾಗಿರುತ್ತದೆ.

1. ₹ 1000/- ಮಾತ್ರ ಅಂತಿಮ ಶಿಲ್ಕಿನಲ್ಲಿ ಉಳಿಯಬೇಕಾಗಿದ್ದು ಹೆಚ್ಚಾಗಿ ಉಳಿಯುವ ಮೊಬಲಗಿನಿಂದ ಪಿಂಚಣಿ ಮತ್ತು ಉಪದಾನ ಟ್ರಸ್ಟ್ ಗೆ ಆರ್ಥಿಕ ನಷ್ಟ ಉಂಟಾಗುವುದರಿಂದ, ಅಂತಿಮ ಶಿಲ್ಕು ಮೊತ್ತಕ್ಕೆ ಸ್ಪಷ್ಟೀಕರಣ/ಧೃಢೀಕರಣ ನೀಡದಿರುವುದು.
2. ಪ್ರತಿ ಮಾಹೆ ಹಿಂದಿನ ಮಾಹೆಗಿಂತ ಹೆಚ್ಚಾಗಿರುವ/ಕಡಿಮೆಯಾಗಿರುವ ಪಿಂಚಣಿ/ಕುಟುಂಬ ಪಿಂಚಣಿದಾರರ ಸಂಖ್ಯೆಗಳಿಗೆ /ಮೊತ್ತಕ್ಕೆ ಬದಲಾವಣೆಗೊಂಡ ವ್ಯತ್ಯಾಸಕ್ಕೆ ವಿವರಣೆ ನೀಡದಿರುವುದು.
3. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಭಾಗದಿಂದ ಬೇರ್ಪಟ್ಟು ಹೊಸ ವಿಭಾಗ ರಚನೆಯಾಗಿದ್ದಲ್ಲಿ ಪಿಂಚಣಿ/ಕುಟುಂಬ ಪಿಂಚಣಿದಾರರ ಸಂಖ್ಯೆಗಳನ್ನು ದೃಢೀಕರಿಸದೆ ಇರುವುದು, ಹಾಗೂ ವರ್ಗಾವಣೆಗೆ ಸಂಬಂಧಿಸಿದ ಕಛೇರಿಯಿಂದ ಮಂಜೂರಾತಿ ನೀಡಿರುವ ಮಾಹಿತಿ ಇಲ್ಲದಿರುವುದು.
4. ಪ್ರತಿ ಮಾಹೆ ನಿಧಿ ಕೋರಿಕೆಯನ್ನು 20ನೇ ತಾರೀಖಿನೊಳಗೆ ಸಲ್ಲಿಸದೆ ಇರುವುದು.
5. ಪ್ರಸ್ತುತ, ಪಿಂಚಣಿ ಮತ್ತು ಉಪದಾನ ಟ್ರಸ್ಟ್ ಕಛೇರಿಯಲ್ಲಿ ಪಿಂಚಣಿ/ಕುಟುಂಬ ಪಿಂಚಣಿದಾರರ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿರುವುದಿಲ್ಲ. ಆದ್ದರಿಂದ ಎಲ್ಲಾ ಲೆಕ್ಕ ಘಟಕಗಳು ಅಕ್ಟೋಬರ್ 2013 ರ ತಿಂಗಳಲ್ಲಿರುವಂತೆ ಎಲ್ಲಾ ಪಿಂಚಣಿ/ಕುಟುಂಬ ಪಿಂಚಣಿದಾರರ ಪಟ್ಟಿಯನ್ನು (ಒಂದು ಬಾರಿಗೆ ಮಾತ್ರ) ಕಡ್ಡಾಯವಾಗಿ ಈ ಕೆಳಗೆ ತಿಳಿಸಿದ ನಮೂನೆಯಲ್ಲಿ 25.10.2013 ರ ಒಳಗಾಗಿ ಕಳುಹಿಸಲು ಸೂಚಿಸಿದೆ.

| ಕ್ರಮ ಸಂಖ್ಯೆ | ಪಿಂಚಣಿ/ಕುಟುಂಬ ಪಿಂಚಣಿದಾರರ ಹೆಸರು | ಪಿ ಪಿ ಎ ಸಂಖ್ಯೆ | ಆರ್ ಪಿ ಎ ಆರ್ ಸಂಖ್ಯೆ | ಪಿಂಚಣಿ/ಕುಟುಂಬ ಪಿಂಚಣಿ ಮೊತ್ತ |
|---|---|---|---|---|

6. ಪ್ರತಿ ತಿಂಗಳು ನಿಧಿ ಕೋರಿಕೆ ಕಳುಹಿಸುವಾಗ ಪಿಂಚಣಿ/ಕುಟುಂಬ ಪಿಂಚಣಿದಾರರ ಒಟ್ಟು ಪಟ್ಟಿಗೆ ಈ ಕೆಳಗಿನ ಕಾರಣಗಳಿಂದಾಗಿ ಸೇರುವ/ಕಡಿಮೆಯಾಗುವ ಪಿಂಚಣಿ/ಕುಟುಂಬ ಪಿಂಚಣಿದಾರರ ಹೆಸರನ್ನು ಮಾತ್ರ ಧೃಢೀಕರಿಸಿ ಸಲ್ಲಿಸಲು ಸೂಚಿಸಲಾಗಿದೆ.

- ಮರಣ ಹೊಂದಿದಲ್ಲಿ,
- ಜೀವಿತ ಪ್ರಮಾಣ ಪತ್ರ ನೀಡದೇ ಇದ್ದಲ್ಲಿ,
- ಸ್ಥಳ ಬದಲಾವಣೆಗೊಂಡು ಸೇರ್ಪಡೆಯಾದಲ್ಲಿ/ಕಡಿಮೆಯಾದಲ್ಲಿ,
- ಹೊಸದಾಗಿ ಸೇರ್ಪಡೆಯಾದಾಗ,
- ಇತರೆ,

ಮೇಲೆ ತಿಳಿಸಿದ ಮಾಹಿತಿಯನ್ನು ಕಳುಹಿಸಲು ತಪ್ಪಿದಲ್ಲಿ ಆ ತಿಂಗಳಿನ ನಿಧಿಯನ್ನು ತಡೆಹಿಡಿಯಲಾಗುವುದು. ಹೀಗಾಗಿ, ನಿಧಿ ಬಿಡುಗಡೆ ಆಗದೆ ಉಂಟಾಗುವ ತೊಂದರೆಗಳಿಗೆ, ಸಂಬಂಧಿಸಿದ ಲೆಕ್ಕ ಘಟಕಗಳೇ ನೇರವಾಗಿ ಜವಾಬ್ದಾರರಾಗುವುದಾಗಿ ಸೂಚಿಸಲಾಗಿದೆ.

ನಿಯಂತ್ರಣಾಧಿಕಾರಿ ಮತ್ತು ವ್ಯವಸ್ಥಾಪಕ ಟ್ರಸ್ಟ
ಪಿಂಚಣಿ ಮತ್ತು ಉಪದಾನ ಟ್ರಸ್ಟ್.

ಪ್ರತಿ:

ಅಧೀಕ್ಷಕ ಇಂಜಿನಿಯರ್ (ವಿ), ಮಾಹಿತಿ ತಂತ್ರಜ್ಞಾನ, ಗಣಕ ಯಂತ್ರ ಶಾಖೆ, ಕಾವೇರಿ ಭವನ, ಬೆಂಗಳೂರು-09.

ಎಲ್ಲಾ

ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿಗಳು/ಲೆಕ್ಕಾಧಿಕಾರಿ(ಆಂ.ಪ), ಕಾರ್ಯ ಮತ್ತು ಪಾಲನಾ ವಿಭಾಗ, ಬೆವಿಕಂ/ಚಾವಿಸನಿ/ಗುವಿಸಕಂ/ಹುವಿಸಕಂ/ಮವಿಸಕಂ.